


ಎಸ್.ಎಮ್.ಎ.ಟ್ರಸ್ಟ್

# ಶಿವಾನಂದ ಮಹಾವಿದ್ಯಾಲಯ, ಕಾಗವಾಡ 591223

## ಕಾಗವಾಡ ಪರಿಸರದ ಕುಲಕಸುಬುಗಳ

## ಅಧ್ಯಯನ ೨೦೧೮-೧೯

## ಬಿ.ಎ.IVth ಕನ್ನಡ

## ಐಚ್ಛಿಕ ಹಾಗೂ ಅವಶ್ಯಕ ವಿದ್ಯಾರ್ಥಿಗಳು

**ಮಾರ್ಗದರ್ಶಕರು–** ಡಾ. ದೇವಿಕಾ.ಡಿ.ನಗರಕರ, ಮುಖ್ಯಸ್ಥರು ಕನ್ನಡ ವಿಭಾಗ

ಶಿವಾನಂದ ಮಹಾವಿದ್ಯಾಲಯ, ಕಾಗವಾಡ 591223

2018–19 ನೇ ಸಾಲಿನ ಶಿವಾನಂದ ಮಹಾವಿದ್ಯಾಲಯದ ಬಿ.ಎ. ದ್ವಿತೀಯ ವರ್ಷದ ವಿದ್ಯಾರ್ಥಿ/ನಿಯರು ಸಂದರ್ಶನ ಮಾಡಿದ ಕಾಗವಾಡ ಕ್ಷೇತ್ರದ ಕುಲಕಸಬುಗಳ ಕುಟುಂಬದ ಮಾಹಿತಿಯ ಸಂಗ್ರಹ

Dr. S. O. Halasagi
I/c. PRINCIPAL,
Shivanand College,
Kagwad: Dist. B·lagavi.



Scanned by CamScanner

## ಮೆಚ್ಚುಗೆಯ ಮಾತು

ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ
ಹಾಸನಿಕ್ಕೆ ಸಾಲಿಗನಾದ, ವೇದವನೋದಿ ಹಾರವನಾದ
ಕರ್ಣದಲಿ ಜನಿಸಿದವರುಂಟೆ? ಜಗದೊಳಗೆ
ಇದು ಕಾರಣ ಕೂಡಲ ಸಂಗಮದೇವಾ
ಲಿಂಗಸ್ಥಲವನರಿದವನೆ ಕುಲಜನು.

ಹಲವು ಭಾಷೆ, ಹಲವು ಜಾತಿ, ಹಲವು ಧರ್ಮಗಳ ನಾಡು ನಮ್ಮದು. ಆದಾಗ್ಯೂ ಜಾತಿಯ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಶತಮಾನಗಳಿಂದ ಒಂದು ವರ್ಗದ ಜನರಂತೂ ನಿರಂತರವಾಗಿ ಶೋಷಣೆಗೆ ಒಳಗಾಗುತ್ತಲಿದೆ.

ಬುದ್ಧ, ಬಸವ, ಅಂಬೇಡ್ಕರ ಯಾರೇ ಬಂದರೂ ಈ ಜಿಡ್ಡು ಗಟ್ಟಿದ ಸಮಾಜ ಪರವರ್ತನೆಯಾಗಬೇಕಾದಷ್ಟು ಇನ್ನೂ ಆಗಿಲ್ಲವೆಂಬುದೇ ವಿಷಾದದ ಸಂಗತಿ "ಬದುಕುವುದಕ್ಕಾಗಿ ಒಂದು ವೃತಿಯನ್ನು ಅವಲಂಬಿಸಿದಾಗ ಆ ಕಸಬುಗಳೇ ಮುಂದೊಂದಿನ ಕುಲಕಸಬುಗಳಾಗಿ ಪರಿವರ್ತನೆಯಾದದ್ದುಂಟು.

ಕುಂಬಾರ, ಕ್ಷೌರಿಕ, ಮಡಿವಾಳ, ಚಮ್ಮಾರ, ಬಡಿಗ, ಅಕ್ಕಸಾಲಿಗ, ನೇಕಾರ ಹೀಗೆ ಹತ್ತು ಹಲವಾರು ಕುಟುಂಬಗಳು, ಜಾಗತಿಕರಣದ ಸುಳಿಗೆ ಸಿಕ್ಕು ಬೀದಿಗೆ ಬಂದಿವೆ ಅಷ್ಟೇ ಅಲ್ಲ ಇವರು ಅಲೆಮಾರಿಗಳಾಗಿದ್ದಾರೆ. ಅವರ ಮುಂದಿನ ಭವಿಷ್ಯ? ಅವರ ಮಕ್ಕಳ ಶಿಕ್ಷಣ ಇವೆಲ್ಲದರ ಮೇಲೆ ಬೆಳಕು ಚೆಲ್ಲುವುದೇ ಈ ಅಧ್ಯಯನದ ಉದ್ದೇಶ.

ಸಮಾಜದ ಸಮತೋಲನಕ್ಕೆ ಎಲ್ಲ ಕಸಬುಗಳೂ ಬೇಕು, ಇವರುಗಳಲ್ಲಿ ಯಾರೊಬ್ಬರು ಇರದಿದ್ದರೂ ಲೋಕದ ಆಟವೇ ನಡೆಯುವದಿಲ್ಲವೇನೋ! ಬಹಳಷ್ಟು ಜನರಿಗೆ ಇದು ಗೊತ್ತಿಲ್ಲ. ನಮ್ಮ ಕೈಯಲ್ಲಿ ದುಡ್ಡಿರಬಹುದು, ನಮ್ಮ ಬಟ್ಟೆ ನಾವೇ ನೇಯಲು ಆಗುವುದೇ? ಕಾಲಿಗೆ ಚಪ್ಪಲಿ ಹೊಲಿದಕೊಳ್ಳಲು ಬರುವುದೇ? ಒಂದೇ ಎರಡೇ ಸ್ನೇಹಿತರೆ ಪ್ರತಿಯೊಂದು ಕುಲಕಸಬುಗಳ ಬಗ್ಗೆ ನಮಗೆ ಗೌರವಾದರಗಳು ಇರಬೇಕು, ಅಂದಾಗ ಮಾತ್ರ ನೇಪಥ್ಯಕ್ಕೆ ಸರಿಯುತ್ತಿರುವ ಹಲವಾರು ಕುಲಕಸಬುಗಳು ಮತ್ತೆ ಸ್ಪರ್ಧಾತ್ಮಕ ಜಗತ್ತಿನೊಡನೆ ಪೈಪೋಟಿ ಮಾಡಬಹುದು.

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

ಇನ್ನು ನಮ್ಮ ಶಿಕ್ಷಣ ಪದ್ಧತಿಯಲ್ಲಿ, ಭೋಧನಾಕ್ರಮದಲ್ಲಿ ಬದಲಾವಣೆಯ ಗಾಳಿ ಬೀಸಬೇಕು, ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳ ಜ್ಞಾನ ಕೇವಲ ನಾಲ್ಕು ಗೋಡೆಗಳಿಗೆ ಸೀಮಿತವಾಗದೆ, ಆದರಾಚೆಗೂ ಅದು ಬೆಳೆಯಬೇಕು. ಅವರಲ್ಲಿಯೂ ಒಂದಿಷ್ಟು ಹೊಸದನ್ನು ನೋಡುವ, ಅಲೋಚಿಸುವ ಪ್ರವೃತ್ತಿ ಬೆಳೆಯಲಿ ಎಂಬ ಕಾಣದಿಂದ ಹಲವಾರು ವರ್ಷಗಳಿಂದ ವಿದ್ಯಾರ್ಥಿಗಳನ್ನು ಇಂಥ ವಿಧಾಯಕ ಕಾರ್ಯಗಳಲ್ಲಿ ತೊಡಗಿಸುತ್ತಾ ಬಂದಿದ್ದೇನೆ. 2018–19 ನೆಯ ಶೈಕ್ಷಣಿಕ ಸಾಲಿನ ಬಿ.ಎ. ಎರಡನೆಯ ವರ್ಷದಲ್ಲಿ ಓದುತ್ತಿರುವ (ಕೆಲವರನ್ನು ಬಿಟ್ಟು) ವಿದ್ಯಾರ್ಥಿಗಳಿಗೆ "ಕಾಗವಾಡ ಪರಿಸರದ ಕುಲಕಸಬುಗಳ ಅಧ್ಯಯನ" ಮಾಡುವಿರಾ? ಎಂದಾಗ ಬಹಳ ಉತ್ಸುಕತೆಯಿಂದ ಒಂದೊಂದು ಗ್ರುಫ್ ಮಾಡಿಕೊಂಡು ಒಂದೊಂದು ಗುಂಪಿನವರು ಒಂದೊಂದು ಕುಲಕಸುಬಿನ ಕುರಿತು "ಕ್ಷೇತ್ರಕಾರ್ಯದ" ಮೂಲಕ ಅವರ ಬದುಕು ಬವಣೆಯನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಈವೊಂದು ಸಣ್ಣಸಾಧನೆ ಮುಂದಿನ ಅವರ ಭವಿಷ್ಯಕ್ಕೆ ಮೆಟ್ಟಿಲಾಗಬಹುದು ಇಲ್ಲಾ ಮೈಲಿಗಲ್ಲಾಗಬಹುದು.

ನನ್ನೊಲುಮೆಯ ವಿದ್ಯಾರ್ಥಿಗಳೆ ಧನ್ಯವಾದ.

ದಿನಾಂಕ:07/02/2019

ಡಾ.ದೇವಿಕಾ.ಡಿ.ನಗರಕರ
ಮುಖ್ಯಸ್ಥರು ಕನ್ನಡ ವಿಭಾಗ
ಶಿವಾನಂದ ಮಹಾವಿದ್ಯಾಲಯ,ಕಾಗವಾಡ

Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

# ಪರಿವಿಡಿ


| ಕ್ರಮ ಸಂಖ್ಯೆ | ಕಾಗವಾಡ ಪರಿಸರದ ಕುಲಕಸುಬುಗಳ ಅಧ್ಯಯನ ವಿಷಯಗಳು | ಪುಟ ಸಂಖ್ಯೆ |
|---|---|---|
| 1 | ಕುಂಬಾರರು | 1 |
| 2 | ಪತ್ತಾರರು (ಅಕ್ಕಸಾಲಿಗರು) | 10 |
| 3 | ಕ್ಷೌರಿಕರು | 18 |
| 4 | ಅಗಸರು (ಮಡಿವಾಳರು) | 27 |
| 5 | ಬಡಿಗೇರರು | 36 |
| 6 | ಚಮ್ಮಾರರು | 45 |
| 7 | ಕಮ್ಮಾರರು | 54 |


Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner

## ಕ್ಷೇತ್ರ ಕಾರ್ಯ

## ಕಾಗವಾಡ ಪರಿಸರದ ಕುಲಕಸುಬುಗಳ ಅಧ್ಯಯನ 2018–19

## ಕುಂಬಾರರು

**ಪೀಠಿಕೆ:–**

**"ಕಾಗವಾಡ ಪರಿಸರದ ಕುಲಕಸುಬುಗಳ ಅಧ್ಯಯನ"** ಈ ಕಾರ್ಯಕ್ಷೇತ್ರದಲ್ಲಿ ನಾವು ಆಯ್ಕೆ ಮಾಡಿಕೊಂಡ ವಿಷಯ ವಸ್ತು ಕುಂಬಾರಿಕೆ. ಕುಂಬಾರಿಕೆಯು ಪ್ರಮುಖ ಕುಲಕಸಬುಗಳಲ್ಲೊಂದಾಗಿದೆ. ಇಂದಿಗೂ ಈ ವೃತ್ತಿಯನ್ನು ಆಧರಿಸಿ ಎಷ್ಟೋ ಕುಟುಂಬಗಳು ತಮ್ಮ ಜೀವನ ನಡೆಸುತ್ತಿವೆ. ಕುಂಬಾರಿಕೆಯಲ್ಲಿ ವಿವಿಧ ಮಣ್ಣುಗಳಾದ ಜೇಡಿ ಮಣ್ಣು, ,ಮೆಕ್ಕಲು ಮಣ್ಣು, ಜಂಬೆಟ್ಟಿಗೆ ಮಣ್ಣು, ಕೆಂಪುಮಣ್ಣು ಮುಂತಾದವುಗಳನ್ನು ಬಳಸಿ ಸುಂದರವಾದ ಮಡಿಕೆ ಪಾತ್ರೆಗಳನ್ನು ತಯಾರಿಸುತ್ತಾರೆ.

ಹಿಂದಿನ ಕಾಲದಲ್ಲಿ ಪ್ರತಿಯೊಂದು ಗೃಹ ಬಳಕೆ ವಸ್ತುಗಳು ಮಣ್ಣಿನಿಂದ ತಯಾರಾಗುತ್ತಿದ್ದವು ಹಾಗಾಗಿ ಕುಂಬಾರಿಕೆಯು ಬಹಳ ಪ್ರಾಮುಖ್ಯತೆ ಪಡೆದಿತ್ತು. ಕುಂಬಾರರ ಕುಟುಂಬಗಳು ಈ ವೃತ್ತಿಯನ್ನು ಅವಲಂಬಿಸಿ ತಮ್ಮ ಜೀವನವನ್ನು ನಡೆಸುತ್ತಿದ್ದವು ಇಂದಿಗೂ ಎಷ್ಟೋ ಇನರು(ಕುಟುಂಬಗಳು) ಈ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿವೆ. ಇವತ್ತು ಕೇವಲ ಹಬ್ಬ ಹರಿದಿನಗಳಲ್ಲಿ ಮಾತ್ರ ಮಣ್ಣಿನ ಮಸ್ತುಗಳನ್ನು ಬಳಸುತ್ತೇವೆ.
**ಉದಾ:–** ಸಂಕ್ರಾತಿ ಹಬ್ಬದಲ್ಲಿ ಚಿಕ್ಕ ಚಿಕ್ಕ ಮಣ್ಣಿನ ಮಡಿಕೆಗಳನ್ನು ತಂದು ಅವುಗಳಲ್ಲಿ ಧಾನ್ಯಗಳನ್ನು ತುಂಬಿ ಅವುಗಳನ್ನು ಪೂಜಿಸುತ್ತಿದ್ದಾರೆ.

ಮಣ್ಣಿನ ಗಣಪತಿಯ ಮೂರ್ತಿಯನ್ನು ತಂದು ಪೂಜಿಸುತ್ತೇವೆ. ಈ ಕಾರ್ಯ ಕ್ಷೇತ್ರವು ಕುಂಬಾರಿಕೆಯ ಕುರಿತು ಮಾಹಿತಿಯನ್ನು ಒದಗಿಸುವ ಉದ್ದೇಶವನ್ನು ಹೊಂದಿದೆ.



Scanned by CamScanner

ಕುಂಬಾರರು

ಕುಟುಂಬ-2

**ಕುಟುಂಬದ ಮುಖ್ಯಸ್ಥರು:-**

| | |
|---|---|
| ಹೆಸರು | :- ಸಹದೇವ ನಾನಪ್ಪ ಕುಂಬಾರ |
| ಊರು | :- ಕಾಗವಾಡ |
| ವಯಸ್ಸು | :- 85 |
| ಕುಟುಂಬ ಜನಸಂಖ್ಯೆ | :-3 ಜನ |
| ಕುಟುಂಬ | :- ಅವಿಭಕ್ತ |

1. **ಈ ವೃತ್ತಿಯನ್ನು ನೀವು ಎಷ್ಟು ವರ್ಷದಿಂದ ಪ್ರಾರಂಭಿಸಿದ್ದೀರಿ?**

   ಈ ವೃತ್ತಿಯನ್ನು ವಂಶಪರಂಪರೆಯಿಂದ ಮುಂದುವರೆಸಿಕೊಂಡು ಬಂದಿದ್ದಾರೆ.

2. **ಕುಂಬಾರಿಕೆ ಹೊರತುಪಡಿಸಿ ನಿಮಗೆ ಬೇರೆ ಆದಾಯದ ಮೂಲ ಇದೆಯೆ?**

   ವಂಶಪರಂಪರೆಯಿಂದ ಬಂದಿದ್ದರಿಂದ ಇದನ್ನು ಮುಂದುವರಿಸಿಕೊಂಡಿದ್ದೇವೆ. ಜೊತೆಗೆ ಕೃಷಿಯು ಒಂದು ಆದಾಯದ ಮೂಲವಾಗಿದೆ.

3. **ಈ ವೃತ್ತಿಯಿಂದನಮ್ಮ ದಿನದ ಆದಾಯ ಎಷ್ಟು?**

   ಅ) ದಿನದ ಆದಾಯ 150 ರೂಪಾಯಿ

   ಆ) ಕೆಲವೊಂದು ಸಲ ಲಾಭವಾಗುತ್ತದೆ. ಕೆಲವೊಂದು ಸಲ ನಷ್ಟವಾಗುತ್ತದೆ

4. **ನಿಮಗೆ ಈ ಆದಾಯದಿಂದ ಜೀವನ ನಡೆಸಲು ಸಾಧ್ಯವಿದೆಯೇ?**


   ಇಲ್ಲ ಕಾರಣ ಲಾಭ-ನಷ್ಟದ ಏರುಪೇರಿನಿಂದಾಗಿ ಮತ್ತು ಆರ್ಥಿಕ ಪರಿಸ್ಥಿತಿ ಸಾಮಾನ್ಯವಾಗಿದ್ದರಿಂದ ಸಾಧಾರಣ ಜೀವನವನ್ನು ಸಾಗಿಸುತ್ತಿದ್ದೇವೆ. ಬೇಕು ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲಾ.




Scanned by CamScanner

-:ಕುಂಬಾರರೊಂದಿಗೆ ಕ್ಷೇತ್ರಕಾರ್ಯ ವಿದ್ಯಾರ್ಥಿನಿಯ ಸಂದರ್ಶನದ ಭಾವಚಿತ್ರ:-







Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Whats NO: 9986101571

Scanned by CamScanner

# ಅಕ್ಕಸಾಲಿಗರು (ಪತ್ತಾರರು)

ಪೀಠಿಕೆ:-

ಭಾರತದ ಸಾಮಾಜಿಕ ಸ್ತರವಿನ್ಯಾಸವು ಮುಖ್ಯವಾಗಿ ಇಲ್ಲಿರುವ ಆಯಾ ವೃತ್ತಿಗಳಾಧಾರದ ಮೇಲೆ ವಿಂಗಡಿಸಲ್ಪಟ್ಟಿದೆ: ಹೇಗೆಂದರೆ ಇಲ್ಲಿನ ಪ್ರತಿಯೊಂದು ಕುಟುಂಬವು ತನ್ನದೇ ಆದ ಕುಲಕಸುಬಿನ ಮೂಲಕ ಸಮಾಜದಲ್ಲಿ ಗುರುತಿಸಲ್ಪಡುತ್ತದೆ. ಅವೇ ವೃತ್ತಿಗಳು ಆ ಕುಟುಂಬಗಳ ಕುಲ ಅಥವಾ ಜಾತಿಗಳಾಗಿ ಆಕುಲ-ಜಾತಿಗಳು ಇಂದಿಗೂ ಅಡ್ಡಹೆಸರುಗಳಾಗಿ ಬಳಕೆಯಾಗುತ್ತಿವೆ. ಹೀಗೆ ಪುರಾತನಕಾಲದಿಂದಲೂ ಪೀಳಿಗೆಗಳಿಂದ- ಪೀಳಿಗೆಗಳಿಗೆ ಬೆಳೆದು ಬಂದ ವೃತ್ತಿಗಳನ್ನು "ಕುಲಕಸುಬುಗಳು" ಎನ್ನುತ್ತೇವೆ.

ಭಾರತದಲ್ಲಿ ಪ್ರಮುಖ ಕುಲಕಸುಬುಗಳೆಂದರೆ, ಅಕ್ಕಸಾಲಿಗ. ಕುಂಬಾರ, ಚಮ್ಮಾರ, ಕಮ್ಮಾರ, ಬಡಿಗ, ಕಲ್ಲುಕುಟಿಗ (ವಡ್ಡರು), ಕ್ಷೌರಿಕ, ಅಂಬಿಗ, ಕೊರವರ (ಬುಟ್ಟಿ, ಹಗ್ಗ ಹೆಣೆಯುವವರು) ಸಿಂಪಿಗ, ತಳ್ವಾರ, ಓಲೆಕಾರ, ಬಳೆಗಾರ, ಒಕ್ಕಲಿಗ, ಗಾಣಿಗರು ಮುಂತಾದವು.ಈ ಪ್ರಮುಖ ಕುಲಕಸುಬುಗಳಲ್ಲಿ ಅಕ್ಕಸಾಲಿಗತನ ಅಥವಾ ಪತ್ತಾರಿಕೆಯು ಒಂದು ಅಕ್ಕಸಾಲಿಗರು ಮೂಲತ: ವ್ಯಾಪಾರಿಗಳು, ಕುಶಲಕರ್ಮಿಗಳಾಗಿದ್ದು, ರಜತ,ವಜ್ರ, ಚಿನ್ನಾಭರಣಗಳಿಗೆ ವಿವಿಧ ಸುಂದರ ವಿನ್ಯಾಸಗಳನ್ನು ಕೊಡುವ ಮೂಲಕ ಸಮಾಜದಲ್ಲಿ ತಮ್ಮದೇ ಆದ ಹೆಗ್ಗುರುತನ್ನು ಮೂಡಿಸಿದ್ದಾರೆ.


ಈಗಿನ ನಮ್ಮ " ಕಾಗವಾಡದ ಪರಿಸರದ ಕುಲಕಸುಬುಗಳ ಅಧ್ಯಯನ" ಕಾರ್ಯಕ್ಷೇತ್ರದ ವಿಷಯವಸ್ತು "ಅಕ್ಕಸಾಲಿಗರು" ಕುರಿತು ಅವರ ಹಿಂದಿನ ಇತಿಹಾಸ, ಇಂದಿನ ತಂತ್ರಜ್ಞಾನ, ಆಧುನೀಕರಣದ ಪರಿಣಾಮ ಪ್ರಚಲಿತ ಬದಲಾವಣೆಗಳು ಸ್ಫರ್ಧಾ ಮನೋಭಾವ, ವೃತ್ತಿ ನೀತಿ, ಕೌಶಲ್ಯಗಳು ಮುಂತಾದವುಗಳ ತಾತ್ವಿಕ ಅಧ್ಯಯನ ಈ ಕಾರ್ಯಕ್ಷೇತ್ರದ ಮುಖ್ಯ ಉದ್ದೇಶ,


Scanned by CamScanner

-:ಪತ್ತಾರರೊಂದಿಗೆ ಕ್ಷೇತ್ರಕಾರ್ಯ ವಿಧ್ಯಾರ್ಥಿನಿಯ ಸಂದರ್ಶನದ ಭಾವಚಿತ್ರ:-









Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

## ಉಪಸಂಹಾರ :-

ಭಾರತದ ಇತಿಹಾಸದಲ್ಲಿ ಮಾನವನು ತನ್ನ ಜೀವನೋಪಾಯಕ್ಕಾಗಿ ಕೆಲವೊಂದು ವೃತ್ತಿಗಳನ್ನು ಮಾಡತೊಡಗಿದನು. ಮತ್ತು ಅದೇ ವೃತ್ತಿಯನ್ನು ತನ್ನ ಮುಂದಿನ ಪೀಳಿಗೆಯು ಮಾಡತೋಡಗಿತ್ತು. ಅದುವೇ ಅನುವಂಶಿಕ/ಪಾರಂಪರಿಕ ಒಂದು ವೃತ್ತಿ ಎನಿಸಿ ಕೊಳ್ಳಲಾರೆಂಬಿಸಿತು. ಮುಂದೆ ಈ ವೃತ್ತಿಗಳೇ ಕುಲಕಸುಬುಗಳ್ಳಾಗಿ, ಅಡ್ಡ ಹೆಸರುಗಳಾಗಿ ಕರೆಸಿಕೊಂಡವು.

ಹೀಗೆ ವೃತಿಗಳಲ್ಲೊಂದಾದ ಅಗಸರ ವೃತ್ತಿ ಈ ವೃತಿಯ ವ್ಯಕ್ತಿಗಳು ಶ್ರಮಜೀವಿಗಳಾಗುತ್ತಿದ್ದರು. ಆದರೆ ಇವತ್ತು ಬಟ್ಟೆಗಳನ್ನು ತೊಳೆಯುವುದುನ್ನು ಬಿಟ್ಟು ಬಟ್ಟೆಗಳನ್ನು ಇಸ್ತ್ರಿಮಾಡುವ ವೃತಿಯಲ್ಲಿ ತೊಡಗಿದರು ಇಂದಿನ ವೃತ್ತಿಕಾರರ ಮಕ್ಕಳು ಈ ವೃತ್ತಿಯಲ್ಲಿ ತೊಡಬಾರದು ಎಂದು ತಿಳಿಸುತ್ತಾರೆ. ಏಕೆಂದರೆ ತಮ್ಮ ಮಕ್ಕಳು ಸುಶಿಕ್ಷಿತರಾಗಿ ಬೇರೆ ಉದ್ಯೋಗವನ್ನು ಅಥವಾ ಹುದ್ದೆಯನ್ನು ಮಾಡಬೇಕು ಎಂಬ ಆಸೆಯನ್ನು ಪಡುತ್ತಾರೆ ಅದರಲ್ಲಿ ಇವತ್ತಿನ ಯುವಕರು ಈ ವೃತ್ತಿಯನ್ನು ಮಾಡಲು ಆಸೆಪಡುವುದಿಲ್ಲ.


ಆಧುನಿಕ ಉಪಕರಣಗಳ ಬಳಕೆ ಅಷ್ಟೊಂದು ಪ್ರಭಾವಿತವಾಗಿರುವುದಿಲ್ಲ ಕಾರಣ ವಿದ್ಯುತ್ ಮಿಶನರಿಗಳನ್ನು ಉಪಯೋಗಿಸುವುದರಿಂದ ವಿದ್ಯುತ್ ಬಿಲ್ ಹೆಚ್ಚಾಗುತ್ತದೆ. ಮತ್ತು ಕಲ್ಲಿದ್ದಲನ್ನುಕೊಂಡು ತರುವುದು ಬಂದು ವೃತಿಕಾರರು ತಮ್ಮ ಅಳಲನ್ನು ವ್ಯಕ್ತಪಡಿಸುತ್ತಾರೆ.

ಈ ವೃತ್ತಿಯನ್ನು ಇವತ್ತು ಮಡಿವಾಳ, ಪರೀಟ, ಸೂರ್ಯವಂಶಿ, ಅಡ್ಡ ಹೆಸರನ್ನು ಪಡೆದವರಲ್ಲಿ ಕಾಣಬಹುದಾಗಿದೆ. ಕೆಲ ವಚನಕಾರರಲ್ಲಿ ಮಡಿವಾಳ ಮಾಚಿದೇವನ್ನು ಕಾಯಕ ವೃತ್ತಿಯನ್ನು ಕೈಗೊಳ್ಳುವುದು ಮುಖ್ಯ ಎಂದು ಕಾಯಕವನ್ನು ಕೈಗೊಂಡು ತಮ್ಮ ವಿಚಾರಗಳನ್ನು ಜನರಲ್ಲಿ ತೋರಪಡಿಸಲು ಪ್ರಾರಂಭಿಸಿದರು. ಈ ವೃತ್ತಿಗೂ ಕೂಡಾ ಹಲವಾರು ವರ್ಷಗಳ ಇತಿಹಾಸವಿದೆ ಎಂದು ತಿಳಿಸಿಬಹುದು.


ಇವತ್ತು ಈ ವೃತ್ತಿಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದ್ದೆ ಏಕೆಂದರೆ ಪ್ರತಿಯೊಂದು ಮನೆಯಲ್ಲಿ ತನ್ನ ಪೂರೈಕೆಗಳು ಮಾಡಿಕೊಳ್ಳುತ್ತಿದ್ದಾರೆ. ಬಟ್ಟೆಗಳನ್ನು ತೊಳೆಯುವುದಾಗಿರಬಹುದು ಇಲ್ಲವೇ ಇಸ್ತ್ರೀ ಮಾಡುವುದಾಗಿರಬಹುದು. ಎಲ್ಲೋ ಒಂದು ಕಡೆ ವೃತ್ತಿಯ ಪ್ರಭಾವ ಕಡಿಮ ಆಗತೋಡಗಿತ್ತು. ಪ್ರತಿ ಮನೆಯು ಇವತ್ತು ಬಟ್ಟೆಯನ್ನು ತೊಳೆಯುವ ಹಾಗೂ ಪ್ರತಿಯೊಬ್ಬರು ಮನೆಯಲ್ಲಿ ಸ್ವಯಂ ವಿದ್ಯುತ್ ಇಸ್ತ್ರಿ ಪಟ್ಟಿಗೆಗಳನ್ನು ಹೊಂದಿದ್ದಾರೆ. ಆದರಿಂದ ಅವರೇ ತಮ್ಮ ಕೆಲಸವನ್ನು ಮಾಡಿಕೊಳ್ಳುತ್ತಿದ್ದಾರೆ.

Scanned by CamScanner

-:ಅಗಸರೊಂದಿಗೆ ಕ್ಷೇತ್ರಕಾರ್ಯ ವಿದ್ಯಾರ್ಥಿಯ ಸಂದರ್ಶನದ ಭಾವಚಿತ್ರ








Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.




Scanned by CamScanner

-:ಬಡಿಗೇರರೊಂದಿಗೆ ಕ್ಷೇತ್ರಕಾರ್ಯ ವಿಧ್ಯಾರ್ಥಿನಿಯ ಸಂದರ್ಶನದ ಭಾವಚಿತ್ರ:-






www.shutterstock.com • 664756129





Dr. S. O. Halasagi
I/c. PRINC...
Shivanand ...,
Kagwad. Dis. ...gavi



Scanned by CamScanner

-:ಚಮ್ಮಾರರೊಂದಿಗೆ ಕ್ಷೇತ್ರಕಾರ್ಯ ವಿದ್ಯಾರ್ಥಿನಿಯ ಸಂದರ್ಶನದ ಭಾವಚಿತ್ರ:-








Dr. S. O. Halasagi
I/c. PRINCIPAL,
Shivanand College,
Kagwad. Dist. B...





Scanned by CamScanner

-:ಕಂಬಾರ(ಕಮ್ಮಾರ)ರೊಂದಿಗೆ ಕ್ಷೇತ್ರಕಾರ್ಯ ವಿದ್ಯಾರ್ಥಿಯ ಸಂದರ್ಶನದ ಭಾವಚಿತ್ರ









Dr. S. O. Halasagi
I/c. PRINCIPAL,
Shivanand College,
Kagwad. Dist. Belagavi.

Scanned by CamScanner